

# ಮೂಗಿನಲ್ಲಿ ರಕ್ತ ಬರುವುದೇಕೆ?

**ಅನೇಕ ಕಾರಣಗಳಿಂದ ಮೂಗಿನಿಂದ ರಕ್ತ ಬರುತ್ತದೆ. ಕೆಲವು ಸಣ್ಣಪುಟ್ಟ ಸಮಸ್ಯೆಯನ್ನು ಮನೆಯಲ್ಲೇ ನಿಭಾಯಿಸಬಹುದು. ತೀವ್ರ ತೊಂದರೆ ಕಂಡುಬಂದರೆ ತಜ್ಞ ವೈದ್ಯರನ್ನು ಸಂಪರ್ಕಿಸಲೇಬೇಕು.**

■ ಡಾ. ವಿನಯ ಶ್ರೀನಿವಾಸ್

ಎರಡು ದಿನಗಳ ಟ್ರೆಕ್ಕಿಂಗ್ ಮುಗಿಸಿ ಮನೆಗೆ ಬಂದ ಮರುದಿನವೇ ಮೂಗಿನಲ್ಲಿ ರಕ್ತ ಒಸರುವುದನ್ನು ಕಂಡ ಗೆಳತಿ ಆತಂಕದಿಂದ ಫೋನ್ ಮಾಡಿ 'ಮೂಗಿನಲ್ಲಿ ರಕ್ತ ಒಸರುತ್ತಿದೆ. ಏನು ಮಾಡಲಿ' ಎಂದಳು.

'ಎತ್ತರ ಪ್ರದೇಶದ ಒಣ ಹವೆಯ ವಾತಾವರಣದಲ್ಲಿ ತಿರುಗಾಡಿದ್ದರಿಂದಲೇ ಹಾಗಾಗಿರುತ್ತದೆ, ಮೂಗನ್ನು ಸ್ವಲ್ಪ ಒತ್ತಿ ಹಿಡಿದರೆ ಸರಿ ಹೋಗಬಹುದು, ಗಾಬರಿಯಾಗುವುದು ಬೇಡ' ಎಂದು ನಾನು ಸಮಾಧಾನ ಮಾಡಿದ್ದೆ.

ಹೌದು, ಮೂಗಿನಲ್ಲಿ ರಕ್ತ ಬರುವುದನ್ನು ಸಾಮಾನ್ಯವಾಗಿ ಆಗಾಗ ನೋಡುತ್ತಿರುತ್ತೇವೆ. ಮೂಗಿನ ಸಾಕಷ್ಟು ರಕ್ತನಾಳಗಳು ಒಳಗಿನ ಲೋಳೆ ಪದರದ ಮೇಲ್ಮೈಗೆ ಹತ್ತಿರವಾಗಿಯೇ ಇರುವುದರಿಂದ ಮೂಗಿಗೆ ಯಾವುದೇ ಬಗೆಯ ಸಣ್ಣ ಪುಟ್ಟ ಪೆಟ್ಟು ಬಿದ್ದರೂ ಮೂಗಿನಲ್ಲಿ ರಕ್ತ ಒಸರುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಸಮಸ್ಯೆಯನ್ನು ಮನೆಯಲ್ಲಿಯೇ ನಿರ್ವಹಿಸಬಹುದಾದರೂ ಪದೇ ಪದೇ ಕಂಡು ಬಂದಾಗ ಅಥವಾ ತೀವ್ರವಾಗಿದ್ದಾಗ ವೈದ್ಯರನ್ನು ಸಂಪರ್ಕಿಸುವುದು ಅಗತ್ಯ.

ಮೂಗಿನ ರಕ್ತಸ್ರಾವದಲ್ಲಿ ಎರಡು ಬಗೆ. ಮೊದಲನೆಯದು ಮೂಗಿನ ಕೆಳ ಮತ್ತು ಮುಂಭಾಗದ ರಕ್ತಸ್ರಾವ ಮತ್ತು ಎರಡನೆಯದು ಮೇಲಿನ ಹಾಗೂ ಹಿಂಭಾಗದ ರಕ್ತಸ್ರಾವ. ಸಾಮಾನ್ಯವಾಗಿ ಮುಂಭಾಗದ್ದಕ್ಕಿಂತಲೂ ಮೂಗಿನ ಹಿಂಭಾಗದ ರಕ್ತಸ್ರಾವವು ತೀವ್ರ ಸ್ವರೂಪದ್ದಾಗಿರುತ್ತದೆ.